Development of Malnad Areas.

*Q.—191. Smt. B. L. SUBBAMMA (Chickmagalur).—

Will the Government be pleased to state :—

whether they intend to take any steps for the development of the Malnad areas in view of its backwardness ?

Sri RAMAKRISHNA HEGDE (Minister for Development, Panchayat Raj and Co-operation).—[On behalf of Sri S. Nijalingappa (Chief Minister)].

*A.—No.

Sri RAMAKRISHNA HEGDE.—There is a small amendment to the answer printed. The answer as amended would be, Government do not intend to take any steps exclusively for the development of malnad areas.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಇಲ್ಲ ಎಂದು ಉತ್ತರ ಕೊಟ್ಟಿದ್ದೀರ. ಹಾಗಾದರೆ ಮಲೆನಾಡು ಸಂಚಾರ ದೃಷ್ಟಿಯಿಂದ ವಸ್ತು ಅಭಿವೃದ್ಧಿ ಕಾರ್ಯಗಳ ದೃಷ್ಟಿಯಿಂದ ಪರಿಪೂರ್ಣವಾಗಿದೆ ಎಂದು ಸರಕಾರದ ಭಾವನೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಉತ್ತರಕೆ. ಇದ್ದ ತಿದ್ದುಪಡಿಯನ್ನು ಮಾನ್ಯ ಸದಸ್ಯರಿಗೆ ಹೇಳಿದೆ. ಮಲೆನಾಡು ಪರಿಪೂರ್ಣವಾಗಿ ಅಭಿವೃದ್ಧಿಯಾಗಿದೆ ಎಂಬ ಅಭಿಪ್ರಾಯ ಯಾರಿಗೂ ಇರಲಾರದು.

9.00 A. M.

ಶ್ರೀ ಎಸ್. ಗೋಪಾಲಗೌಡ.—ಮಲೆನಾಡು ಗುಡ್ಡಗಾಡು ಪ್ರದೇಶ ಮತ್ತು ಅಲ್ಲಲ್ಲಿ ಹೊಳೆಗಳೂ ಕೂಡ ಹರಿಯುತ್ತವೆ. ಈ ದೃಷ್ಟಿಯಿಂದ ಆ ಪ್ರದೇಶದ ಜನಗಳಿಗೆ ಕಮ್ಯುನಿಕೇಷನ್ನಿಗೆ ಬಹಳ ಕಷ್ಟ ಇದೆ ಎನ್ನುವುದನ್ನು ಮನಗಂಡು ಹಿಂದಿನ ಸರ್ಕಾರದವರು ಮಲೆನಾಡಿನ ಅಭಿವೃದ್ಧಿಗಾಗಿ ಒಂದು ಪ್ರತ್ಯೇಕವಾದ ಬೋರ್ಡನ್ನೇ ರಚನೆ ಮಾಡಿರಲಿಲ್ಲವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾಡಿತ್ತು.

ಶ್ರೀ ಕೆ. ಎಚ್. ರಂಗನಾಥ್.—ಮಲೆನಾಡಿನ ಅಭಿವೃದ್ಧಿ ಬೋರ್ಡನ್ನು ನಿಲ್ಲಿಸುವುದಕ್ಕೆ ಕಾರಣವೇನು ? ಮಲೆನಾಡು ಅಭಿವೃದ್ಧಿಯಾಗಿದೆ ಎನ್ನುವ ಕಾರಣದಿಂದ ಆ ಬೋರ್ಡನ್ನು ನಿಲ್ಲಿಸಿದ್ದೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅಭಿವೃದ್ಧಿ ಆಗಿದೆ ಎನ್ನುವ ಕಾರಣವಲ್ಲ. ಮೂರನೆ ಪಂಚವಾರ್ಷಿಕ ಯೋಜನೆಯನ್ನು ತಯಾರು ಮಾಡುವಾಗ ಮಲೆನಾಡಿನ ಅಭಿವೃದ್ಧಿ ಬೋರ್ಡಿನವರು ಕೆಲವು ಸೂಚನೆಗಳನ್ನು ಮಾಡಿದ್ದಾರೆ. ಆ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಯೋಜನೆಯನ್ನು ತಯಾರು ಮಾಡಿದ್ದಾರೆ. ಅದರಂತೆ ಮಲೆನಾಡಿನ ಅಭಿವೃದ್ಧಿಯ ಎಲ್ಲಾ ಕ್ರಮಗಳನ್ನೂ ಕೈಗೊಳ್ಳಲಾಗುತ್ತಿದೆ. ಅದಕ್ಕೋಸ್ಕರ ಬೋರ್ಡಿನ ಅವಶ್ಯಕತೆ ಇಲ್ಲ ಎಂದು ಅದನ್ನು ರದ್ದು ಮಾಡಿದರು.

ಶ್ರೀಮತಿ ರತ್ನಮ್ಮ ಮಾಧವರಾವ್.—ಮಲೆನಾಡಿನ ಅಭಿವೃದ್ಧಿಗಾಗಿ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅನೇಕ ಕಾರ್ಯಕ್ರಮಗಳನ್ನು ಸರ್ಕಾರದವರು ಕೈಗೊಂಡಿದ್ದಾರೆ. ಮಲೆನಾಡಿನ ಅಭಿವೃದ್ಧಿ ಆಗದೆ ಇಡಿ ಮೈಸೂರು ರಾಜ್ಯದ ಔದ್ಯೋಗಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಮಲೆನಾಡಿನಲ್ಲಿರುವಂತ ಖನಿಜ ಸಂಪತ್ತಾಗಲೀ, ಅರಣ್ಯ ಸಂಪತ್ತಾಗಲೀ ಅಥವಾ ಇತರ ಯಾವ ಸಂಪತ್ತೇ ಆಗಲೀ ಇಡೀ ಮೈಸೂರು ರಾಜ್ಯದ ಹಿತದೃಷ್ಟಿಯಿಂದ ಅಭಿವೃದ್ಧಿ ಆಗಬೇಕಾಗಿದೆ. ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಸರ್ಕಾರದವರು ಖರ್ಚುಮಾಡುವಷ್ಟು ಯಾವ ಡಿಸ್ಟ್ರಿಕ್ಟಿನಲ್ಲಿಯೂ ಖರ್ಚು ಮಾಡುವುದಿಲ್ಲ. ಈಗ ಅಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತಕ್ಕಂಥ ಬೇರೆ ಬೇರೆ ಯೋಜನೆಯನ್ನು ತಯಾರು ಮಾಡುತ್ತಿದ್ದೇವೆ. ಅದರ ಪ್ರಕಾರ ಅಲ್ಲಿ ಕೆಲವು ಹೊಸ ಕೈಗಾರಿಕೆಗಳು ಆಗುವುದಾದರೆ ಅಲ್ಲಿ ಸಿಕ್ಕತಕ್ಕಂಥ ಕಚ್ಚಾ ಸಾಮಗ್ರಿಗಳು ಏನಿವೆ ಅವುಗಳನ್ನು ಉಪಯೋಗ ಮಾಡಿಕೊಳ್ಳಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಮಲೆನಾಡಿನ ಅಭಿವೃದ್ಧಿ ಬೋರ್ಡನ್ನು ಪುನಃ ಅಸ್ತಿತ್ವಕ್ಕೆ ತರುವುದು ಯೋಗ್ಯವಾದ ವಿಚಾರ. ಸರ್ಕಾರದವರು ಇದನ್ನು ಪುನರಾಲೋಚನೆ ಮಾಡುತ್ತಾರೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಇದ್ದರಿಂದ ಆ ವಿಚಾರ ಸರ್ಕಾರದ ಯೋಚನೆಯಲ್ಲಿದೆಯೇ ಅಥವಾ ಕೈಬಿಟ್ಟಿದ್ದಿರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅವರು ಆಶ್ವಾಸನೆಯನ್ನು ಕೊಟ್ಟಿದ್ದು ಪುನಃ ವಿಚಾರ ಮಾಡುತ್ತೇವೆ ಎಂದು. ಈಗ ಅದನ್ನು ಪುನಃ ವಿಚಾರಮಾಡಿ ನೋಡಿದಾಗ ಈಗಿರುವ ಪರಿಸ್ಥಿತಿಯಲ್ಲಿ ಮಲೆನಾಡಿನ ಅಭಿವೃದ್ಧಿಗಾಗಿ ಪ್ರತ್ಯೇಕವಾದ ಒಂದು ಬೋರ್ಡ್ ರಚನೆ ಮಾಡುವುದು ಸೂಕ್ತವಲ್ಲ ಎಂದು ಸರ್ಕಾರದ ಅಭಿಪ್ರಾಯ.

ಶ್ರೀಮತಿ ರತ್ನಮ್ಮ ಮಾಧವರಾವ್.—ಯಾವ ಯಾವ ಭಾಗವನ್ನು ಮಲೆನಾಡು ಎಂದು ಪರಿಗಣಿಸಿದ್ದೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ವಿಷಯ ಮಾನ್ಯ ಸದಸ್ಯರಿಗೆ ಚೆನ್ನಾಗಿ ಗೊತ್ತಿದೆ. ಎಲ್ಲಿ ಹೆಚ್ಚು ಗುಡ್ಡಗಾಡು ಇದ್ದು ಅರಣ್ಯ ಹೆಚ್ಚಾಗಿ ಇದ್ದು ಹೆಚ್ಚು ಮಳೆ ಎಲ್ಲಿ ಬೀಳುತ್ತದೆಯೋ ಅದು ಮಲೆನಾಡು ಪ್ರದೇಶ.

ಶ್ರೀ ಎಸ್. ಸುಬ್ಬಯ್ಯನಾಯಕ್.—ಮಲೆನಾಡು ಅಭಿವೃದ್ಧಿಗಾಗಿ ಒಂದು ಬೋರ್ಡನ್ನು ರಚನೆ ಮಾಡುವುದು ಸೂಕ್ತವಲ್ಲ ಎಂದು ಕಾಡು ಬಂದರೆ, ಮಲೆನಾಡಿನ ಅಭಿವೃದ್ಧಿಗಾಗಿ ಸರ್ಕಾರದವರು ಯಾವ ರೀತಿಯಲ್ಲಿ ಗಮನ ಕೊಡುತ್ತಿದ್ದಾರೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಈಗಾಗಲೇ ಆ ವಿಷಯವನ್ನು ನಾನು ಹೇಳಿದ್ದೇನೆ. ಆರ್ಥಿಕ ಮತ್ತು ಔದ್ಯೋಗಿಕ ಅಭಿವೃದ್ಧಿಯ ಬಗ್ಗೆ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅನೇಕ ಕಾರ್ಯಕ್ರಮಗಳು ಸಮಾವೇಶವಾಗಿವೆ. ಮಲೆನಾಡಿನ ಅಭಿವೃದ್ಧಿಗಾಗಿ ರಸ್ತೆ ಸಾರಿಗೆ ಸೌಕರ್ಯವನ್ನೊದಗಿಸುವುದು ಶಿಕ್ಷಣ ಸಂಸ್ಥೆಗಳನ್ನು ಹೆಚ್ಚು ಹೆಚ್ಚಾಗಿ ಸ್ಥಾಪಿಸುವುದು, ವೈದ್ಯಕೀಯ ಇತ್ಯಾದಿ ಸವಲತ್ತುಗಳನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರದವರು ಗಮನ ಕೊಡಲಿಕ್ಕೆ ಪ್ರಯತ್ನ ಮಾಡುತ್ತಾರೆ.

ಶ್ರೀ ಗೋಪಾಲ ಸಾರೆನ್.—ದಕ್ಷಿಣ ಕನ್ನಡ ಜಿಲ್ಲೆಯ ಮಲೆನಾಡು ಪ್ರದೇಶದಲ್ಲಿ ಫಾರೆಸ್ಟ್ ಏರಿಯಾದಲ್ಲಿ ಅಲ್ಲಿನ ಅಭಿವೃದ್ಧಿಗಾಗಿ ಸರ್ಕಾರದವರು ಯಾವ ಕಾರ್ಯಕ್ರಮವನ್ನು ಕೈಗೊಂಡಿದ್ದು ನನಗೆ ಕಂಡು ಬರುವುದಿಲ್ಲ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಇಡೀ ದಕ್ಷಿಣ ಕನ್ನಡ ಜಿಲ್ಲೆಯೇ ಮಲೆನಾಡು ಪ್ರದೇಶ. ಅಲ್ಲಿ ಏನೇನು ಕೆಲಸಗಳಾಗುತ್ತಿವೆ ಎನ್ನುವುದನ್ನು ವಿವರಿಸಬೇಕಾದ ಅಗತ್ಯವೇ ಇಲ್ಲ. ರೈಲ್ವೆ ಆಗುತ್ತಿದೆ. ಬಂದರು ಆಗುತ್ತಿದೆ. ಈ ರೀತಿ ನಾನಾ ರೀತಿಯ ಕೆಲಸ ಕಾರ್ಯಗಳಾಗುತ್ತಿವೆ.

ಶ್ರೀ ಎಸ್. ಗೋಪಾಲಗೌಡ.—ಹಿಂದೆ ಇದ್ದ ಮಲೆನಾಡಿನ ಅಭಿವೃದ್ಧಿ ಮಂಡಳಿಯ ನಲಹೆಗಳನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ನಂತರ ಆ ಮಂಡಳಿಯು ಅಗತ್ಯವಿಲ್ಲವೆಂದು ರದ್ದು ಮಾಡಿದರು ಎಂದು ಹೇಳಿದರು. ಹಾಗಾದರೆ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಲೆನಾಡಿನ ಪ್ರಗತಿ, ಸನ್ನಿವೇಶ, ಜನಜೀವನ ಇವುಗಳ ಕಡೆ ಲಕ್ಷ್ಯ ಕೊಟ್ಟು ವಿಶೇಷವಾದ ಕಾರ್ಯಕ್ರಮಗಳನ್ನೇನಾದರೂ ಪಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಿಕೊಂಡು ಅವುಗಳನ್ನು ಕಾರ್ಯಗತ ಮಾಡುತ್ತೀದ್ದೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಸ್ಟೇಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಯಾರು ಯಾರು ಮಾನ್ಯ ಸದಸ್ಯರು ಇರುತ್ತಾರೆಯೋ ಅವರೆಲ್ಲರೂ ಮಲೆನಾಡಿನ ಅಭಿವೃದ್ಧಿಯ ಬಗ್ಗೆ, ಮಲೆನಾಡಿನ ಸಮಸ್ಯೆಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಹುದು. ಹಿಂದೆ ಯಾವ ತರಹ ಅಭಿವೃದ್ಧಿ ಮಂಡಳಿ ಇತ್ತೋ ಅದು ಕೇವಲ ಅಡ್ವೈಜರಿ ಬಾಡಿಯಾಗಿತ್ತು. ಬರೀ ಸಲಹೆಯನ್ನು ಕೊಡುವುದು ಮಾತ್ರ ಅದರ ಕೆಲಸವಾಗಿತ್ತು. ಬರೀ ಅಡ್ವೈಜರಿ ಅಧಿಕಾರವಿರುವ ಬೋರ್ಡನ್ನು ಇಟ್ಟಾಡಿದರೆ ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ, ಯಾವ ಅಭಿವೃದ್ಧಿಯೂ ಆಗುವುದಿಲ್ಲ ಎಂದು ನನ್ನ ಅನುಭವ. ಈ ದೃಷ್ಟಿಯಿಂದ ಅದನ್ನು ಕೈಬಿಟ್ಟೆವು. ಇನ್ನು ಹಿಂದೆ ಇದ್ದ ಮಲೆನಾಡು ಅಭಿವೃದ್ಧಿ ಮಂಡಳಿಯ ನಲಹೆಗಳನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದೆ. ಆದರಂತೆ ಕಾರ್ಯಕ್ರಮಗಳು ನಡೆಯುತ್ತಿವೆ. .

ಶ್ರೀ ಎಚ್. ಆರ್. ಕೇಶವಮೂರ್ತಿ.—ಮಲೆನಾಡಿನ ಅಭಿವೃದ್ಧಿಗಾಗಿ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ಯಾವ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎನ್ನುವ ಬಗ್ಗೆ ಸರ್ಕಾರದವರು ಸರ್ವೆ ಮಾಡುವುದಕ್ಕೆ ಸರ್ಕಾರದವರು ಏರ್ಪಾಡು ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅಲ್ಲಿ ಅನೇಕ ತರಹ ಸರ್ವೆ ನಡೆಯುತ್ತಿದೆ. ಹೈಡ್ರೋ ಎಲೆಕ್ಟ್ರಿಕ್ ಪವರ್ ಉತ್ಪಾದನೆ ಮಾಡುವುದಕ್ಕೆ ಮಲೆನಾಡಿನಲ್ಲಿ ಎಲ್ಲಿ ಸಾಧ್ಯವಾಗುತ್ತದೆ ಎನ್ನುವ ಬಗ್ಗೆ ಕೂಲಂಕುಷವಾಗಿ ಸರ್ವೆ ನಡೆದಿದೆ. ಖನಿಜ ಸಂಪತ್ತಿನ ವಿಷಯವಾಗಿ ಸರ್ವೆ ನಡೆದಿದೆ. ಫಾರೆಸ್ಟ್ ಬಗ್ಗೆ ಸರ್ವೆ ಮಾಡಿದ್ದಾರೆ. ಹೀಗೆ ಬೇರೆ ಬೇರೆ ಇಲಾಖೆಗಳ ಮುಖಾಂತರ ಆ ಕೆಲಸಗಳು ನಡೆಯುತ್ತಿವೆ.

ಶ್ರೀ ಎಸ್. ಗೋಪಾಲಗೌಡ.—ಈಗತಾನೆ ಮಾನ್ಯ ಮಂತ್ರಿಗಳು ಹೇಳಿದರು. ಮಲೆನಾಡಿನ ಪ್ರದೇಶವಾದ ಶಿವಮೊಗ್ಗಾ ಜಿಲ್ಲೆಯಲ್ಲಿ 10-6 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದು. ಅಲ್ಲಿರತಕ್ಕಂಥ ಪ್ರಕೃತಿ ಸಂಪತ್ತನ್ನು ತೆಗೆದುಕೊಂಡು ಬಂದು ಇಡೀ ರಾಜ್ಯಕ್ಕೆಲ್ಲಾ ಸೌಲಭ್ಯವನ್ನು ಒದಗಿಸುತ್ತಿದ್ದಾರೆ. ಆ ಪ್ರದೇಶದಲ್ಲಿರತಕ್ಕ ಜನರ ಜೀವನವನ್ನು ಉತ್ತಮಪಡಿಸುವುದಕ್ಕೆ ಪ್ರತ್ಯೇಕವಾಗಿ ಹಣವನ್ನು ಮೀಸಲಾಗಿಟ್ಟು ಅದರ ಬಗ್ಗೆ ಕಾರ್ಯಕ್ರಮವನ್ನು ಕೈಗೊಳ್ಳುವ ದೃಷ್ಟಿಯಿಂದ ಅಲ್ಲಿ ಒಂದು ಸರ್ವೇಯನ್ನಾದರೂ ಮಾಡಿಸಿದ್ದೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದಕ್ಕಾಗಿ ಪ್ರತ್ಯೇಕವಾಗಿ ಹಣವನ್ನು ಮೀಸಲಾಗಿಟ್ಟಿಲ್ಲ ಇಡುವ ಅವಶ್ಯಕತೆಯೂ ಇಲ್ಲ. ಶರಾವತಿಯ ಯೋಜನೆಯಿಂದ ಉತ್ಪತ್ತಿಯಾಗತಕ್ಕ ವಿದ್ಯುಚ್ಛಕ್ತಿಯ ಸಹಾಯದಿಂದ ಮಲೆನಾಡಿನ ಸುತ್ತಮುತ್ತ ಹೊಸ ಕೈಗಾರಿಕೆಗಳು ಬರುವುದಕ್ಕೆ ಸರ್ಕಾರದವರು ಪ್ರೋತ್ಸಾಹವನ್ನು ಕೊಡುತ್ತಾರೆ. ಅದರಿಂದ ಜನರ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತದೆ. ಜನಗಳಿಗೆ ಆಪ್ರತ್ಯಕ್ಷವಾಗಿ ಅದರಿಂದ ಲಾಭವಾಗುತ್ತದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಮಲೆನಾಡು ಅಭಿವೃದ್ಧಿ ಸಮಿತಿಯನ್ನು ರದ್ದು ಮಾಡಿದ ಮೇಲೆ ಇಷ್ಟು ಒಳ್ಳೆಯ ಕೆಲಸವಾಗಿರಬೇಕಾದರೆ ಅದನ್ನು ಪುನಃ ರಿವೈಸ್ ಮಾಡುವುದರಿಂದ ಹೆಚ್ಚು ಕೆಲಸವಾಗುತ್ತದೆಯಲ್ಲವೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಕೇವಲ ನಲಹಾ ಸಮಿತಿಯಾಗಿರುವುದರಿಂದ ವಿಶೇಷ ಪ್ರಯೋಜನವಾಗುವುದಿಲ್ಲ. ಅದೇ ನಲಹೆಯನ್ನು ಮಾನ್ಯ ಸದಸ್ಯರು ಇನ್ನೂ ಹೆಚ್ಚು ತೀವ್ರತರವಾಗಿ ಮಾಡಬಹುದು.

ಶ್ರೀ ಎಸ್. ಶಿವಪ್ಪ.—ಮಲೆನಾಡಿನಲ್ಲಿ ಆ ಪ್ರದೇಶಕ್ಕೆ ತಕ್ಕಂಥ ಸಮಸ್ಯೆಗಳಿರುವುದರಿಂದ ಶ್ರೀ ಮಾನ ನಿಜಲಿಂಗಪ್ಪನವರ ನೇತೃತ್ವದಲ್ಲಿ ಶ್ರೀ ಬದರಿನಾರಾಯಣ ಅವರ ಅಧ್ಯಕ್ಷತೆಯಲ್ಲಿ ಮಲೆನಾಡು ಅಭಿವೃದ್ಧಿ ಸಮಿತಿಯನ್ನು ಮಾಡಿ, ಅಲ್ಲಿನ ಜನಗಳಿಗೆಲ್ಲ ನಿಮ್ಮ ಅಭಿವೃದ್ಧಿಯನ್ನು ಮಾಡುತ್ತೇವೆಂದು ಸಾರಿಸಾರಿ ಹೇಳಿದ್ದರು. ಈ ದಿವಸ ಆ ಸಮಿತಿ ಬೇಡ ಎನ್ನುವ ತೀರ್ಮಾನಕ್ಕೆ ಬರಬೇಕಾದರೆ ಇದರಲ್ಲಿರುವ ರಾಜಕೀಯವೇನು ಸ್ವಾಮಿ ?

Mr. DEPUTY SPEAKER.—That has been answered already.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತ ಶರಾವತಿಯಂಥ ದೊಡ್ಡ ಪ್ರಾಜೆಕ್ಟ್ ಕೆಲಸ ನಡೆಯುತ್ತಿದೆ, ಭದ್ರಾವತಿಯಲ್ಲಿ ಕಬ್ಬಿಣದ ಕಾರ್ಖಾನೆಯನ್ನು ಮಾಡಿದ್ದೇವೆ ಎಂದು ಹೇಳಿದರು. ಇದನ್ನೆಲ್ಲ ಮಲೆನಾಡು ಅಭಿವೃದ್ಧಿ ಗಾಗಿ ಮಾಡಿದರೇ ಅಥವಾ ಎಲ್ಲ ಭಾಗಗಳಿಗೂ ಅನುಕೂಲವಾಗಲಿ ಎಂದು ಮಾಡಿದಿರಾ ಸ್ವಾಮಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರು ಮಲೆನಾಡು ಅಭಿವೃದ್ಧಿಆಗುವುದು ಮಲೆನಾಡಿನ ಜನರಿಗಾಗಿ ಎಂದು ಅಭಿಪ್ರಾಯ ಪಡುವುದಾದರೆ ಅದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಆ ಭಾಗವನ್ನು ಅಭಿವೃದ್ಧಿ ಮಾಡಿದರೆ ಅದರಿಂದ ಆಗುವ ಪ್ರಯೋಜನವನ್ನು ಮಲೆನಾಡಿನ ಜನರೇ ಅನುಭವಿಸಬೇಕು ಎನ್ನುವುದು ಸಮಂಜಸವಾದುದಲ್ಲ. ಅದನ್ನೆಲ್ಲ ಅವರೇ ಅನುಭವಿಸಿದರೆ ಅಜೀರ್ಣವಾಗುತ್ತದೆ, ಅಷ್ಟು ಸಂಪತ್ತು ಅಲ್ಲದೆ. ಮಲೆನಾಡನ್ನು ಏಕೆ ಅಭಿವೃದ್ಧಿ ಮಾಡಬೇಕು ಎಂದರೆ ಇಡೀ ರಾಜ್ಯದ ಅಭಿವೃದ್ಧಿಯಾಗಬೇಕು, ಔದ್ಯೋಗಿಕ ಅಭಿವೃದ್ಧಿಯಾಗಬೇಕು ಎನ್ನುವ ದೃಷ್ಟಿಯಿಂದ.